**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

ವಿಶೇಷ ಮೊಕದ್ದಮೆ ನಂಃ **74/2023**

| | | |
|---|---|---|
| ಸಾಕ್ಷಿದಾರರ ಹೆಸರು | - ಧನಂಜಯ | ಪಿಡಬ್ಲ್ಯೂ- 02 |
| ತಂದೆಯ ಹೆಸರು | - ಬಸವರಾಜ | ಸಿಡಬ್ಲ್ಯೂ -03 |
| ವಯಸ್ಸು | - 28 ವರ್ಷ | |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಹೊಸಕೋಟೆ | |

ದಿನಾಂಕಃ 13-07-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

**1.** ಚಾಸಾ.1 ಮತ್ತು 2 ರವರು ಗೊತ್ತು. ಆರೋಪಿ ಗೊತ್ತು. ಹೊಸಕೋಟೆಯಲ್ಲಿ ಸೋಮೆಗೌಡರ ಮನೆಯ ಮುಂಭಾಗದಲ್ಲಿ ಚಾಸಾ.1 ರವರಿಗೆ ಆರೋಪಿ ಹೊಡೆದು ಜಾತಿ ನಿಂದನೆ ಮಾಡಿದ ಬಗ್ಗೆ ಸ್ಥಳ ಮಹಜರಿಗೆ ಪೊಲೀಸರು ನನ್ನನ್ನು ಕರೆಸಿದ್ದರು. ಈಗ ತೋರಿಸಿರುವ ದಾಖಲಾತಿಯಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ.4 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

**2.** ಪಂಚನಾಮೆಗೆ ಸ್ಥಳವನ್ನು ಚಾಸಾ.1 ರವರು ತೋರಿಸಿದ್ದು, ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆಯಲಾದ ಫೋಟೋವನ್ನು ನಿಪಿ.3 ಎಂದು ಈಗಾಗಲೇ ಗುರುತಿಸಲಾಗಿದೆ. ಆ

ಸಂದರ್ಭದಲ್ಲಿ ಪೊಲೀಸರು ದೊಣ್ಣೆಯನ್ನು ತೆಗೆದುಕೊಂಡಿರುತ್ತಾರೆ. ಸದರಿ ದೊಣ್ಣೆಯನ್ನು ನೋಡಿದರೆ ಗುರುತು ಹಿಡಿಯಬಲ್ಲೆ. ಸದರಿ ದೊಣ್ಣೆಯನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ. ಮು.ಮಾ.1 ರ ಮೇಲಿರುವ ನನ್ನ ಸಹಿಯನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಸಾಯಂಕಾಲ 4 ಗಂಟೆಯಿಂದ 5 ಗಂಟೆಯವರೆಗೆ ಮಾಡಲಾಗಿದೆ.

ಪಾಟೀ ಸವಾಲು: ಆರೋಪಿತರ ಪರವಾಗಿ ಶ್ರೀ ಡಿ.ಸಿ.ಪಿ. ವಕೀಲರಿಂದಃ-

3. ಚಾಸಾ.1 ನನಗೆ ಸಂಬಂಧಿ ಎಂದರೆ ಸರಿಯಲ್ಲ. ಆದರೆ ಆತ ನನ್ನ ಗೆಳೆಯ. ನಾನು ಚಾಸಾ.1 ರವರ ತಾಯಿಯ ತಮ್ಮನ ಮಗ ಎಂದರೆ ಸರಿಯಲ್ಲ. ನಾನು, ಚಾಸಾ.1, ಚಾಸಾ.2, ಚಾಸಾ.4 ಮತ್ತು ಚಾಸಾ.5 ರವರು ಒಂದೇ ಸಮುದಾಯಕ್ಕೆ ಸೇರಿದವರು ಎಂದರೆ ಸರಿ.

4. ನನಗೆ ಪೊಲೀಸರು ಪಂಚನಾಮೆಗೆ ಬರುವಂತೆ ಲಿಖಿತವಾಗಿ ನೋಟೀಸನ್ನು ನೀಡಿರುವುದಿಲ್ಲ. ಪೊಲೀಸರು ಬಂದು ಅರ್ಧ ಗಂಟೆಯ ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನನ್ನನ್ನು ಸ್ಥಳಕ್ಕೆ ಪೊಲೀಸರು ಕರೆದಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ಪೊಲೀಸರು ಸ್ಥಳದಲ್ಲಿಯೇ ಇದ್ದರು. ಮಹಜರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

5. ಫೋಟೋದಲ್ಲಿ ಸೋಮೇಗೌಡರ ಮನೆ ಕಂಡುಬರುವುದಿಲ್ಲ. ಚಾಸಾ.1 ಬಂದು ಮಹಜರಿಗೆ ಸಹಿ ಮಾಡು ಎಂದು ಹೇಳಿದನ್ನು ಬಿಟ್ಟರೆ ಬಾಕಿ ಉಳಿದಂತೆ ನನಗೆ ಮಾಹಿತಿ ಇರುವುದಿಲ್ಲ. ನಾನು ಚಾಸಾ.1 ರವರ ತಾಯಿಯ ತಮ್ಮನಾಗಿದ್ದಾಗ್ಯೂ ಚಾಸಾ.1 ರವರಿಗೆ

ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ನ್ನು ಚಾಸಾ.1 ರವರು ಪೊಲೀಸರಿಗೆ ನೀಡಿದ್ದರು.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿಕ್ಕಮಗಳೂರು.

ಸಾಕ್ಷಿಯ ಸಹಿ